ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE : 16/4/21

# ಭಯಾನಕ ಬೆಂಗಳೂರು

## ರಾಜಧಾನಿಯಲ್ಲಿ ಹೆಚ್ಚಿದ ಸೋಂಕು I ರಾಜ್ಯದ ಪ್ರಕರಣ ನಗರದಲ್ಲಿ ದ್ವಿಗುಣ

## ರಾಜ್ಯದ 14 ಸಾವಿರ ಕೇಸುಗಳ ಪೈಕಿ 10 ಸಾವಿರ ಉದ್ಯಾನನಗರಿಯಲ್ಲಿ

ಬೆಂಗಳೂರು: ರಾಜಧಾನಿ ಬೆಂಗಳೂರು ಅಪಾಯದಲ್ಲಿದೆ...!

ಹೌದು, ಇಡೀ ರಾಜ್ಯದಲ್ಲಿ ಕಾಣಿಸಿಕೊಳ್ಳುತ್ತಿದ್ದ ಕೊರೊನಾ ಸೋಂಕು ಪ್ರಕರಣಗಳು ಈಗ ಕೇವಲ ರಾಜಧಾನಿಯಲ್ಲೇ ಕಾಣ ಸಿಗುತ್ತಿವೆ. ಗುರುವಾರ ರಾಜ್ಯಾದ್ಯಂತ 14,738 ಕೇಸು ದೃಢಪಟ್ಟಿದ್ದರೆ, ಬೆಂಗಳೂರೊಂದರಲ್ಲೇ 10,497 ಕೇಸು ದಾಖಲಾಗಿವೆ. ಒಟ್ಟು 66 ಮಂದಿ ಮೃತರಾಗಿದ್ದು, ಬೆಂಗಳೂರಿನಲ್ಲಿ 30 ಮಂದಿ ಅಸುನೀಗಿದ್ದಾರೆ. ಬುಧವಾರಕ್ಕೆ ಹೋಲಿಸಿದರೆ ಹೊಸ ಪ್ರಕರಣಗಳು ಮೂರೂವರೆ ಸಾವಿರ, ಸಾವು 28 ಹೆಚ್ಚು ವರದಿಯಾಗಿವೆ.

ಮೊದಲ ಅಲೆಯಲ್ಲಿ ಅತಿ ಹೆಚ್ಚು ಎಂದರೆ ರಾಜ್ಯದಲ್ಲಿ 10,517, ಬೆಂಗಳೂರಿನಲ್ಲಿ 5,500 ಪ್ರಕರಣಗಳು ಕಾಣಿಸಿಕೊಂಡಿದ್ದವು. ಸದ್ಯ ರಾಜ್ಯದಲ್ಲಿ ಒಂದೂವರೆ ಪಟ್ಟು ಹೆಚ್ಚಳವಾಗಿ 15 ಸಾವಿರ ಆಸುಪಾಸಿಗೆ, ಬೆಂಗಳೂರಿನಲ್ಲಿ ದುಪ್ಪಟ್ಟಾಗಿ, 10 ಸಾವಿರ ಗಡಿ ದಾಟಿವೆ. ಇನ್ನು ಈ ಹಿಂದೆ ರಾಜ್ಯದಲ್ಲಿ ಒಂದು ದಿನಕ್ಕೆ ವರದಿಯಾಗುತ್ತಿದ್ದ ಪ್ರಕರಣಗಳು ಬೆಂಗಳೂರಿನಲ್ಲಿ ಒಂದೇ ದಿನಕ್ಕೆ ಕಾಣಿಸಿಕೊಂಡಿರುವುದರಿಂದ ಆ ಎಲ್ಲಾ ಸೋಂಕಿತರ ಪತ್ತೆ, ಚಿಕಿತ್ಸೆ ಪ್ರಾಥಮಿಕ ಸಂಪರ್ಕಿತರ ಪತ್ತೆಯಲ್ಲಿ ವ್ಯತ್ಯಯವಾಗುವ ಸಾಧ್ಯತೆಗಳಿವೆ. ಜತೆಗೆ ಹಾಸಿಗೆ ಸಮಸ್ಯೆಯೂ ತಲೆದೋರುವ ಸಾಧ್ಯತೆಗಳಿವೆ.

**ಸಾವು ಮೂರು ಪಟ್ಟು ಕಮ್ಮಿ :** ಮೊದಲ ಅಲೆಯಲ್ಲಿ ಪ್ರಕರಣಗಳು 10 ಸಾವಿರ ವರದಿಯಾಗುತ್ತಿದ್ದ ಸಂದರ್ಭದಲ್ಲಿ ಸೋಂಕಿತರ ಸಾವು 140 ಇರುತ್ತಿತ್ತು. ಸದ್ಯ ಪ್ರಕರಣಗಳು 15 ಸಾವಿರ ಆಸುಪಾಸಿಗೆ ಹೆಚ್ಚಾದರೂ, ಸಾವಿನ ಸಂಖ್ಯೆ 66 ಇದೆ. ಮೊದಲ ಅಲೆಗೆ ಹೋಲಿಸಿದರೆ ಸಾವು ಮೂರು ಪಟ್ಟು ಕಮ್ಮಿ ಇದೆ. ಅಲ್ಲದೆ, ತುರ್ತುನಿಗಾ ಚಿಕಿತ್ಸೆ ಪಡೆಯುತ್ತಿದ್ದ ರೋಗಿಗಳ ಸಂಖ್ಯೆಯು ಆ ಸಂದರ್ಭದಲ್ಲಿ 2000 ಕ್ಕೂ ಅಧಿಕ ಇರುತ್ತಿತ್ತು. ಸದ್ಯ 555 ಸೋಂಕಿತರು ಮಾತ್ರ ತುರ್ತು ನಿಗಾಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪ್ರಕರಣಗಳು ಭಾರೀ ಪ್ರಮಾಣದಲ್ಲಿ ಹೆಚ್ಚಾದರೂ ತೀವ್ರತೆ ಕಡಿಮೆ ಇರುವುದು ತುಸು ಸಮಾಧಾನಕರ ಅಂಶ.

▶ 7ನೇ ಪುಟಕ್ಕೆ



ಲಾಕ್‌ಡೌನ್ ಭೀತಿ ಹಿನ್ನೆಲೆಯಲ್ಲಿ ವಲಸೆ ಕಾರ್ಮಿಕರು ಬೆಂಗಳೂರಿನಿಂದ ಸ್ವಗ್ರಾಮಗಳಿಗೆ ತೆರಳಲು ಬಸ್‌ಗಾಗಿ ಕಾದು ಕುಳಿತಿರುವುದು.

### ಒಂದೇ ದಿನ 2 ಲಕ್ಷ ಮಂದಿಗೆ ಸೋಂಕು

ದೇಶವು ಕೇವಲ 24 ಗಂಟೆಗಳ ಅವಧಿಯಲ್ಲಿ ದಾಖಲೆಯ 2 ಲಕ್ಷಕ್ಕೂ ಅಧಿಕ ಕೊರೊನಾ ಸೋಂಕು ಪ್ರಕರಣಗಳಿಗೆ ಸಾಕ್ಷಿಯಾಗಿದೆ. ಬುಧವಾರದಿಂದ ಗುರುವಾರದ ಅವಧಿಗೆ 2,00,739 ಮಂದಿಗೆ ಸೋಂಕು ದೃಢಪಟ್ಟಿದ್ದು, 1,038 ಮಂದಿ ಮೃತಪಟ್ಟಿದ್ದಾರೆ. ಕೇವಲ 10 ದಿನಗಳ ಅವಧಿಯಲ್ಲಿ ದೈನಂದಿನ ಸೋಂಕಿತರ ಸಂಖ್ಯೆ ದುಪ್ಪಟ್ಟಾಗಿದೆ. ಏ.4ರಂದು 1 ಲಕ್ಷ ಹೊಸ ಪ್ರಕರಣ ಪತ್ತೆಯಾಗಿತ್ತು. ಕಳೆದ ವರ್ಷ ಅಮೆರಿಕದಲ್ಲಿ ಸೋಂಕು ವ್ಯಾಪಿಸುತ್ತಿದ್ದ ದರಕ್ಕೆ ಹೋಲಿಸಿದರೆ ಭಾರತದಲ್ಲಿ ಅದಕ್ಕಿಂತ 2–3 ಪಟ್ಟು ಅಧಿಕ ವೇಗದಲ್ಲಿ ಸೋಂಕಿನ ಪ್ರಸರಣವಾಗುತ್ತಿದೆ.

> ಸೋಂಕಿನ ಲಕ್ಷಣ ಹೆಚ್ಚಿದ್ದರೆ, ಉಸಿರಾಟ ಸಮಸ್ಯೆ ಇದ್ದರೆ ಆಸ್ಪತ್ರೆಗೆ ದಾಖಲಾಗಿ. ಮನೆಯಲ್ಲಿಯೆ ಆರೈಕೆ ಮಾಡಿಕೊಳ್ಳಬಹುದು.
>
> • ಡಾ.ಸಿ.ನಾಗರಾಜ್, ನಿರ್ದೇಶಕ, ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ.

> ಸೋಂಕಿತರ ಸಂಖ್ಯೆ ಹೆಚ್ಚುತ್ತಿದೆ. ತುರ್ತು ಚಿಕಿತ್ಸಾ ಘಟಕದ ವ್ಯವಸ್ಥೆ, ಆಕ್ಸಿಜನ್, ವೆಂಟಿಲೇಟರ್ ವ್ಯವಸ್ಥೆ ಸುಧಾರಿಸಿವೆ. ಆತಂಕ ಬೇಡ
>
> • ಗೌರವ್ ಗುಪ್ತ, ಬಿಬಿಎಂಪಿ ಮುಖ್ಯ ಆಯುಕ್ತ

| ಟಾಪ್ 5 ಜಿಲ್ಲೆಗಳು (ಬೆಂಗಳೂರು ಹೊರತುಪಡಿಸಿ) | |
|---|---|
| ಕಲಬುರಗಿ | 624 |
| ತುಮಕೂರು | 387 |
| ಬೀದರ್ | 363 |
| ಮೈಸೂರು | 327 |
| ಮಂಡ್ಯ | 211 |

13

# ಭಯಾನಕ ಬೆಂಗಳೂರು

16/4/21

**1ನೇ ಪುಟದಿಂದ ▶** ಗುಣಮುಖರು ಒಂದು ಮಿಲಿಯನ್‌ನತ್ತ: ರಾಜ್ಯದಲ್ಲಿ ಈವರೆಗೂ ಸೋಂಕು ತಗುಲಿದ್ದ 11.09 ಲಕ್ಷ ಮಂದಿ ಪೈಕಿ 999958 ಮಂದಿ ಗುಣಮುಖರಾಗಿದ್ದು ಒಂದು ಮಿಲಿಯನ್ ಗೆ ಸಮೀಪಿಸಿದೆ. ರಾಜ್ಯ ಒಟ್ಟಾರೆ ಸೋಂಕಿತರಲ್ಲಿ 13122 ಸೋಂಕಿತರ (ಶೇ. 1.2 ರಷ್ಟು) ಸಾವಾಗಿದೆ.

**ಪಾಸಿಟಿವಿಟಿ ದರ ಹೆಚ್ಚಳ:** ಬುಧವಾರಕ್ಕೆ ಹೋಲಿಸಿದರೆ ಸೋಂಕು ಪರೀಕ್ಷೆಗಳು 16 ಸಾವಿರ ಹೆಚ್ಚಾಗಿವೆ. 1.29 ಲಕ್ಷ ಪರೀಕ್ಷೆ ನಡೆದಿದ್ದು 11.4 ಪಾಸಿಟಿವಿಟಿ ದರ ದಾಖಲಾಗಿದೆ. ಪರೀಕ್ಷೆಗೊಳಗಾದ 100 ರಲ್ಲಿ 11 ಮಂದಿಗೆ ಸೋಂಕು ದೃಢಪಟ್ಟಿದೆ.

**ಒಂದು ಲಕ್ಷದತ್ತ:** ಸೋಂಕು ಹೆಚ್ಚಳವಾದ ಹಿನ್ನೆಲೆ ಸಕ್ರಿಯ ಪ್ರಕರಣಗಳು 96561 ತಲುಪಿವೆ. ಈ ಪೈಕಿ 555 ಮಂದಿ ಸ್ಥಿತಿ ಗಂಭೀರ ವಾಗಿದ್ದು ಐಸಿಯುನಲ್ಲಿದ್ದಾರೆ. ಶೇ.80 ಕ್ಕೂ ಅಧಿಕ ಮಂದಿ ಮನೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ದೇಶದಲ್ಲಿ ಯೇ ಮಹಾರಾಷ್ಟ್ರ ಉತ್ತರಪ್ರದೇಶ ಬಿಟ್ಟರೆ ಮೂರನೇ ಅತಿ ಹೆಚ್ಚು ಪ್ರಕರಣಗಳು ಕರ್ನಾಟಕದಲ್ಲಿ ಪತ್ತೆಯಾಗಿವೆ.

**ಬೆಂಗಳೂರಿನ 77 ಆಸ್ಪತ್ರೆಗಳಲ್ಲಿ ಚಿಕಿತ್ಸೆ:** ಸೋಂಕು ಹೆಚ್ಚಳವಾದ ಹಿನ್ನೆಲೆ ಬೆಂಗಳೂರಿನಲ್ಲಿ ಆಸ್ಪತ್ರೆಗಳ ಸಂಖ್ಯೆ ಹೆಚ್ಚಿಸಲಾಗಿದೆ. 14 ಸರ್ಕಾರಿ ಆಸ್ಪತ್ರೆ, 49 ಖಾಸಗಿ ಆಸ್ಪತ್ರೆ, 2 ಸರ್ಕಾರಿ, 11 ಖಾಸಗಿ ವೈದ್ಯಕೀಯ ಕಾಲೇಜಿನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಜತೆಗೆ ಎರಡು ಕೊರೊನಾ ಕೇರ್ ಸೆಂಟರ್‌ಗಳಿವೆ. ಆಸ್ಪತ್ರೆ, ಕೇರ್ ಸೆಂಟರ್ ಸೇರಿ ಸರ್ಕಾರದಿಂದ ಒಟ್ಟಾರೆ 4,500 ಹಾಸಿಗೆ ವ್ಯವಸ್ಥೆ ಮಾಡಲಾಗಿದೆ. ಈ ಪೈಕಿ 3,200 ಹಾಸಿಗೆಗಳು ಭರ್ತಿಯಾಗಿ, 1,200 ಹಾಸಿಗೆಗಳು ಇನ್ನೂ ಲಭ್ಯವಿವೆ. ಒಟ್ಟಾರೆಯಲ್ಲಿ ಶೇ.72ರಷ್ಟು ಹಾಸಿಗೆಗಳು ಭರ್ತಿಯಾಗಿವೆ. ಸರ್ಕಾರಿ ಕೋಟಾದಲ್ಲಿ ಶೇ.10 ಐಸಿಯು ಹಾಸಿಗೆಗಳು, ಶೇ.25 ಆಕ್ಸಿಜನ್ ವ್ಯವಸ್ಥೆ ಸಹಿತ ಬೆಡ್‌ಗಳು, ಶೇ.35ರಷ್ಟು ಸಾಮಾನ್ಯ ಹಾಸಿಗೆಗಳು ಲಭ್ಯವಿವೆ. 3,500 ಸೋಂಕಿತರು ಸ್ವಂತ ಖರ್ಚಿನಲ್ಲಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸದ್ಯ ಬೆಂಗಳೂರಿನಲ್ಲಿ 71,827 ಸಕ್ರಿಯ ಸೋಂಕಿತರಿದ್ದು ಈ ಪೈಕಿ 3,172 ಮಂದಿ ಸರ್ಕಾರಿ ಕೋಟಾದಲ್ಲಿ, 3,877 ಮಂದಿ ಸ್ವಂತ ಖರ್ಚಿನಲ್ಲಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಪೈಕಿ 174 ಸೋಂಕಿತರು ಐಸಿಯುನಲ್ಲಿದ್ದಾರೆ. ಬಾಕಿ 64 ಸಾವಿರಕ್ಕೂ ಅಧಿಕ ಮಂದಿ ಮನೆಯಲ್ಲಿಯೇ ಆರೈಕೆಯಲ್ಲಿದ್ದಾರೆ.